711(991) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ಸಿ ಅಂಡ್ ಡಿ ಜಮೀನಿನಲ್ಲಿ ಎಷ್ಟು ಜನರು ಕೃಷಿ ಮಾಡುತ್ತಿದ್ದಾರೆ.

ಆ) ಸಿ ಅಂಡ್ ಡಿ ವರ್ಗದ ಎಷ್ಟು ಜಮೀನನ್ನು ಅರಣ್ಯ ಇಲಾಖೆಗೆ ನೀಡಲಾಗಿದೆ.

ಇ) ಯಾವ ಉದ್ದೇಶಕ್ಕಾಗಿ ನೀಡಲಾಗಿದೆ;

ಈ) ಸಿ ಅಂಡ್ ಡಿ ವರ್ಗದ ಎಷ್ಟು ಜಮೀನುಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ವಾಪಸ್ಸು ಪಡೆಯಲಾಗಿದೆ;

ಉ) ಸಿ ಅಂಡ್ ಡಿ ವರ್ಗದ ಜಮೀನಿನಲ್ಲಿ ಅಕ್ರಮವಾಗಿ ಕೃಷಿ ಮಾಡಿರುವ ಜಮೀನನ್ನು ಸಕ್ರಮಗೊಳಿಸದೆ ಇರಲು ಕಾರಣವೇನು;

ಊ) ಈ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು)

ಅ) ಮಡಿಕೇರಿ ತಾಲ್ಲೂಕು 605
ವಿರಾಜಪೇಟೆ ತಾಲ್ಲೂಕು 619
ಸೋಮವಾರಪೇಟೆ 5504
ಒಟ್ಟು 6728

ಆ) ಸರ್ಕಾರಿ ಆದೇಶ ಸಂ:ಆರ್‌ಡಿ 106 ಎಲ್‌ಜಿಪಿ 88. ದಿನಾಂಕ 20.7.94 ರನ್ವಯ ಈ ಕೆಳಕಂಡ ಗ್ರಾಮಗಳ ಸರ್ವೆ ಸಂಬರಿನ ವಿಸ್ತೀರ್ಣದ ಜಮೀನನ್ನು ಲ್ಯಾಂಡ್ ಬ್ಯಾಂಕ್ ಉದ್ದೇಶಕ್ಕಾಗಿ ನೀಡಲಾಗಿದೆ.

ಇ) ಮಡಿಕೇರಿ ತಾಲ್ಲೂಕು 6050.98 ಎಕರೆಗಳು
ವಿರಾಜಪೇಟೆ ತಾಲ್ಲೂಕು 5444.54 ಎಕರೆಗಳು
ಸೋಮವಾರ ಪೇಟೆ 19293.00 ಎಕರೆಗಳು
ಒಟ್ಟು 30788.52 ಎಕರೆಗಳು

ಈ) ಮಡಿಕೇರಿ ತಾಲ್ಲೂಕು ವಾಪಸ್ಸು ಪಡೆದಿರುವುದಿಲ್ಲ
ವಿರಾಜಪೇಟೆ ತಾಲ್ಲೂಕು 454.02 ಎಕರೆ
ಸೋಮವಾರ ಪೇಟೆ 1.00 ಎಕರೆ

ಉ) ಸರ್ಕಾರದ ಆದೇಶ ಸಂ:ಆರ್‌ಡಿ 106 ಎಲ್‌ಜಿಪಿ 88. ದಿನಾಂಕ :20.7.1994 ರ ಮೇರೆಗೆ ಲ್ಯಾಂಡ್ ಬ್ಯಾಂಕ್ ನಿರ್ಮಿಸುವ ಸಲುವಾಗಿ ಕಾಯ್ದಿರಿಸಿದ್ದರಿಂದ ಅಕ್ರಮವಾಗಿ ಕೃಷಿ ಮಾಡಿರುವ ಜಮೀನನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.

ಊ) ಮೇಲ್ಕಂಡ ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

712(992) Sri. Bopaiah K.G.